"ಇದು ಜಪಾನ್ ಶ್ಯಾಮಲಾ, ಅಗತ್ಯಬಿದ್ರೆ ಈ ಕಟ್ಟಡದ ಮೇಲೆ ಹೆಲಿಕಾಪ್ಟರ್ ಇಳಿಸಿ ಕರೆಸಿಕೊಳ್ತಾರೆ."

"ನಿಜವಾಗ಼್್ಲೂ!..." ಶ್ಯಾಮಲಾ ಆಶ್ಚರ್ಯದಿಂದ ಕೇಳಿದಳು.

"ನಿಜವಾದ್ರೆ ಎಷ್ಟು ಥ್ರಿಲ್ಲಿಂಗಾಗಿರುತ್ತೆ! ಮೆಹತಾ ಅವ್ರನ್ನ ನೋಡಿ. ಒಂದು ಕಡೆ ಅಣು ಸ್ಫೋಟದ ಅಪಾಯ ಮುಂದಿದ್ದರೂ, ಅವರು ತಮ್ಮ ಕರ್ತವ್ಯದ ಕುರಿತೇ ಯೋಚಿಸುತ್ತಿದ್ದಾರೆ. 'ತುಪಾಕಿ ಹಿಡಿದವನಷ್ಟೇ ಸಿಪಾಯಿಯಲ್ಲ, ಕ್ಲಿಷ್ಟ ಪರಿಸ್ಥಿತಿಯನ್ನು ಮನೋಸ್ಥೈರ್ಯದಿಂದ ಎದುರಿಸುವವನೂ ಸಿಪಾಯಿಯೇ!' ಅಂತಹವರಲ್ಲಿ ಒಬ್ಬರು ನಮ್ಮ ಮೆಹತಾ! ನಮ್ಮ ತಂದೆಯವರು ಯಾವಾಗಲೂ ಹೇಳುತ್ತಿದ್ದ ಒಂದು ಮಾತು ನೆನಪಿಗೆ ಬರ್ತಿದೆ. ಎಷ್ಟು ವರ್ಷ ಬದುಕಿದೆವು ಅನ್ನೋದಲ್ಲ ಮುಖ್ಯ, ಹೇಗೆ ಬದುಕಿದೆವು ಅನ್ನೋದು ಮುಖ್ಯ ಅಂತ.''

"ಜಿತೇಂದ್ರ, ಮೊದಲು ಕೈ ತೊಳ್ಕೊಂಡು ಬನ್ನಿ. ಅನ್ನ ಹೇಗೂ ನೆಲದ ಪಾಲಾಯ್ತು, ಬ್ರೆಡ್ ಆದ್ರೂ ಸ್ವಲ್ಪ ತಿನ್ನೋಣ."

ಶ್ಯಾಮಲಾಳ ಮಾತಿಗೆ ನಗುತ್ತಾ ಜಿತೇಂದ್ರ ಎದ್ದು ವಾಷ್ ಬೇಸಿನ್ ಹತ್ತಿರ ಹೋಗಿ ನಲ್ಲಿ ತಿರುಗಿಸಿದ. ಒಂದೆರಡು ಬೊಗಸೆ ನೀರು ಬಂದು ನಿಂತುಹೋಯಿತು.

"ಅಯ್ಯೋ! ನೀರು ನಿಂತು ಹೋಯ್ತು!..."

"ಬಾತ್‌ರೂಮಿನಲ್ಲಿ ಎರಡು ಬಕೆಟ್‌ಗಳಲ್ಲಿ ನೀರು ಹಿಡಿದಿಟ್ಟಿದೀನಿ. ಅಲ್ಲಿಗೆ ಹೋಗಿ ತೊಳೆದುಕೊಳ್ಳಿ. ನೀರನ್ನು ಮಿತವಾಗಿ ಬಳಸಿ.''

''ಆಯ್ತು'' ಎನ್ನುತ್ತಾ ಬಾತ್‌ರೂಮಿನತ್ತ ಹೆಜ್ಜೆ ಹಾಕಿದ.

"ಇಲ್ಲಿಯವರೆಗೂ ಪ್ರಳಯಾಂತಕ ಸುನಾಮಿಯಿಂದಾಗಿ ಹತ್ತುಸಾವಿರಕ್ಕೂ ಮೇಲ್ಪಟ್ಟು ಜನ ಸಾವನ್ನಪ್ಪಿದ್ದರು. 'ಮಿಯಾಮಿ' ಒಂದರಲ್ಲಿಯೇ ಆರುನೂರು ಹೆಣಗಳು ದೊರೆತಿವೆ. ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರೆ. ಫುಕುಶಿಮಾ ದೈಚೀ ಅಣು ಸ್ಥಾವರದ ಮೂರನೇ ಸ್ಥಾವರ ಕೂಡಾ ಅಪಾಯದ ಸ್ಥಿತಿಯಲ್ಲಿದೆ. ಅಲ್ಲಿನ ಕೂಲಿಂಗ್ ವ್ಯವಸ್ಥೆಯೆಲ್ಲಾ ಅಸ್ತವ್ಯಸ್ತಗೊಂಡಿದೆ. ಹೆಲಿಕಾಪ್ಟರುಗಳ ಸಹಾಯದಿಂದ ಸಮುದ್ರದ ನೀರನ್ನು ಎರಚುತ್ತಿದ್ದಾರೆ. ಭಾರತವೂ ಸೇರಿದಂತೆ ಜಗತ್ತಿನ ಅನೇಕ ದೇಶಗಳು ಸಹಾಯ ಸಾಮಗ್ರಿಗಳನ್ನು ಕಳುಹಿಸುತ್ತಿದ್ದಾರೆ. ಸಂತ್ರಸ್ತರಿಗೆ ಹೊದ್ದುಕೊಳ್ಳಲೂ ಬಟ್ಟೆಗಳಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಮನೆಗಳನ್ನು ಕಳೆದುಕೊಂಡು ಉಟ್ಟಬಟ್ಟೆಗಳಲ್ಲಿ ಹೊರಬಿದ್ದವರೆಷ್ಟು ಜನವೋ!

ಕುಡಿಯುವ ನೀರು, ಹಾಲಿನಲ್ಲಿ ಕೂಡಾ ಸ್ಥಾವರದಿಂದ ಸೋರಿಕೆಯಾಗಿರುವ ಅಣು ವಿಕಿರಣ ಬೆರೆತಿರುವ ಸಾಧ್ಯತೆಗಳು ಕಂಡುಬರುತ್ತಿವೆ. ಹಾಗಾಗಿ ನೀರು ಮತ್ತು ಆಹಾರ ಪದಾರ್ಥಗಳನ್ನು ಪರೀಕ್ಷಿಸದೆ ಸೇವಿಸಕೂಡದೆಂಬ ಮುನ್ನೆಚ್ಚರಿಕೆಯನ್ನು ಮಾಧ್ಯಮಗಳು ಪ್ರಸಾರ ಮಾಡುತ್ತಿದ್ದವು. ಟೀವಿಯಲ್ಲಿ ವಾರ್ತಾ ವಿಶೇಷಗಳನ್ನು ನೋಡುತ್ತ ಕುಳಿತಿದ್ದ ಜಿತೇಂದ್ರ, ಶ್ಯಾಮಲಾ ಅವರ ಕೈಗಳಲ್ಲಿ ಚಿಪ್ಸ್ ಪಾಕೆಟ್ಸ್ ಇದ್ದವು. ವಾರ್ತೆಯ ಕೊನೆಯ ವಾಕ್ಯ ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳುವಂತೆ ಮಾಡಿತು.

'ತಿನ್ನುವುದೋ ಬಿಡುವುದೋ...' ಎನ್ನುವ ಪ್ರಶ್ನೆ ಇಬ್ಬರ ಮನದಲ್ಲೂ ಎದ್ದಿತ್ತು.

"ಏನೂ ತಿನ್ನದಿದ್ದರೆ ಹೇಗೆ ಬದುಕುವುದು? ಸಾಯುವುದೇ ಆದರೆ ತಿಂದೇ ಸಾಯೋಣ..." ಎಂದ ಶ್ಯಾಮಲಾ ನಿರ್ಭಯಳಾಗಿ ಚಿಪ್ಸ್ ತಿನ್ನತೊಡಗಿದಳು.

"ಎಷ್ಟು ಬೇಗ ಎಂತಹ ಬದಲಾವಣೆ ನೋಡಿ! ಮೊನ್ನೆ ಮೊನ್ನೆಯವರೆಗೆ ಈ ಜಪಾನ್ ಭೂಮಿಯ ಮೇಲಿನ ಸ್ವರ್ಗ. ಇಂದು, ಮರುಭೂಮಿ! ನಾಗರಿಕತೆಯಲ್ಲಿ ಸುಖಕ್ಕಿಂತ ದುಃಖವೇ